# ಸಂಜೆ ಬಾನಿನಂಚಿನಲ್ಲಿ ಬಿದ್ದ ಬಿದಿಗೆ ಚಂದಿರ

ಲಾಲ್‌ಬಾಗಿನ ಕೆರೆಯಂಚಿನ ಹುಲ್ಲುಹಾಸಿನ ಮೇಲೆ ಕುಳಿತ ಆವಳ ಮುಖ ಆಗಲೇ ಸೋತು ಮುಳುಗಿದ್ದ ಸೂರ್ಯನ ಕಡೆಯ ಕಿರಣಗಳಿಂದ ಕೆಂಪಾಗಿತ್ತು. ಸಿಟ್ಟಿನಿಂದ ಸಂಪಿಗೆಯೆಸಳಿನ ಮೂಗು ಅದುರುತಿತ್ತು. ಇವನು ಏನೂ ಮಾಡಲಾಗದೇ ಒಮ್ಮೆ ಸಿಟ್ಟಿನಲ್ಲೂ ಅರಳಿಕೊಂಡಿದ್ದ ಅವಳ ಮುದ್ದು ಮುಖವನ್ನೂ, ಇನ್ನೊಮ್ಮೆ ಕೆರೆಯಂಚಿಗೆ ಬಿದ್ದಿದ್ದ ಬಿಲ್ಲಿನಾಕಾರದ ಚಂದ್ರಬಿಂಬವನ್ನೂ–ಇನ್ನೂ ಇರುಳು ಶುರುವಾಗುತ್ತಿದ್ದರೂ ಆಗಲೇ ಪಶ್ಚಿಮಕ್ಕೆ ಜಾರಿಕೊಳ್ಳುತ್ತಿದ್ದ ಬಿದಿಗೆಯ ಚಂದ್ರನನ್ನೂ, ಮತ್ತೊಮ್ಮೆ ತಮ್ಮನ್ನೇ ಗಮನಿಸುತ್ತಿದ್ದ ಸುತ್ತಲಿನ ಜನರನ್ನೂ ನೋಡುತ್ತಿದ್ದ.

ಮಾತು ಹೇಗೆ ಶುರುಮಾಡುವುದೆಂದು ಗೊತ್ತಾಗದೇ ಪೆಚ್ಚಾಗಿ ಕುಳಿತಿದ್ದ ಇವನು. ತಾನು ತಪ್ಪು ಮಾಡಿದ್ದು ನಿಜವಾದರೂ ಅವಳು ಮಾತು ಶುರುಮಾಡಿ, ಜಗಳವಾದರೂ ಮಾಡಿದರೆ ತಾನು ದೀನನಾಗಿ 'ಸಾರಿ' ಕೇಳಬಹುದೆಂದುಕೊಂಡು ಬಂದವನಿಗೆ ಆವಳ ಮೌನ ಎದೆಯಲ್ಲಿ ಉಸಿರು ಸಿಕ್ಕುವಂತೆ ಮಾಡಿತ್ತು. ಮೌನವಾಗಿ ಕೆರೆಯ ಅಂಚಿಗೆ ಬಿದ್ದಿದ್ದ ಚಂದ್ರ ಬಿಂಬವನ್ನೇ ನೋಡುತ್ತಿದ್ದ ಅವಳು ತಟ್ಟನೆ ತಲೆ ತಗ್ಗಿಸಿ ತನ್ನ ಕೈಬೆರಳುಗಳನ್ನು ನೋಡಿಕೊಂಡಳು. ತರ್ಜನಿಯಲ್ಲಿ ಇವನೇ ಕೊಟ್ಟಿದ್ದ ಬೆಳ್ಳಿಯುಂಗುರ. ತುಟಿಗಳನ್ನು ಕಚ್ಚಿಕೊಳ್ಳುತ್ತ ಅದನ್ನು ಬೆರಳಿನಿಂದ ಬಿಚ್ಚಲೋ ಎಂಬಂತೆ ಅತ್ತಿತ್ತ ಸರಿಸಿದಳು, ಇವನ ಕಿವಿಯಲ್ಲಿ ಸುತ್ತಿಗೆ ಹೊಡೆತದ ಶಬ್ದ! ಅದು ತನ್ನ ಹೃದಯದ ಬಡಿತ ಅಂತ ಗೊತ್ತಾಗುವಷ್ಟರಲ್ಲಿ ಅವಳು ಉಂಗುರ ತೆಗೆಯುವ ಪ್ರಯತ್ನ ಬಿಟ್ಟಳು, ತನ್ನ ಕಣ್ಣಿನಿಂದ ಹನಿಯಗೊಡದ ಕಣ್ಣೀರು ಮೂಗಿನಲ್ಲಿ ಸೋರುತ್ತಿತ್ತು ಅನಿಸುತ್ತೆ, ಸೊರ್ರನೆ ಮೂಗೇಳೆದುಕೊಳ್ಳುತ್ತ ಮತ್ತೆ ಖಾಲಿಯಾಗುತ್ತಿದ್ದ ಆಕಾಶದ ಕೆಂಪಿನೆಡೆಗೆ ನೋಡಲಾರಂಭಿಸಿದಳು. ಬೆಚ್ಚಿ ಬೆದರಿ ಬೆಪ್ಪಾಗಿ ಕುಳಿತಿದ್ದ ಇವನು ಮೆಲ್ಲನೆ ಉಸಿರು ಬಿಟ್ಟ.

**ಸಂಜೆ ಬಾನಿನಂಚಿನಲ್ಲಿ ಬಿದ್ದ ಬಿದಿಗೆ ಚಂದಿರ**
**ಶಚೀತೀರ್ಥದಾಳದಲ್ಲಿ ಶಕುಂತಲೆಯ ಉಂಗುರ**

ಕತ್ತಲಾಗುತ್ತಿತ್ತು. ಅವಳನ್ನು ಮಾತನಾಡಿಸಲು ಹೆದರಿ ಹಾಗೇ ಗೊತ್ತಾಗದಂತೆ ಕೈನಲ್ಲಿದ್ದ ತನ್ನ ಮೊಬೈಲಿನಿಂದ ಅವಳ ಮೊಬೈಲ್‌ಗೆ ಕರೆ ಮಾಡಲು ಯತ್ನಿಸಿದ. ಗುಲಾಬಿ ಬಣ್ಣದ ಉಲ್ಲನ್ ಚೀಲದೊಳಗಿದ್ದ ಅವಳ ಮೊಬೈಲ್ ಚಿಲಿಪಿಲಿಗುಟ್ಟಿತು. ಅವಳು ಮೊಬೈಲನ್ನು ಮೆಲ್ಲನೆ ಹೊರತೆಗೆದು ಅದರ ಪರದೆಯನ್ನೊಮ್ಮೆ ನೋಡಿ ಸ್ವಿಚ್ ಆಫ್ ಮಾಡಿ, ಇವನೆಡೆಗೆ ಚೂಪುಗಣ್ಣಿನಿಂದ ನೋಡಿದಳು. ಇವನು ಪೆಚ್ಚು ಪೆಚ್ಚಾಗಿ ತುಟಿಯಂಚಿನಲ್ಲೇ ನಕ್ಕು, ಕಣ್ಣು ಮಿಟುಕಿಸಿದ. ಅವಳು ಇನ್ನೂ ಕೆನ್ನೆಯೂದಿಕೊಂಡು ಮುಖ ತಿರುಗಿಸಿಕೊಂಡಳು,

"ನೇಹಾ, ಚಿನ್ನು..."

ಅವಳು ತಟ್ಟನೆದ್ದು ತನ್ನ ದುಪಟ್ಟಾ ಕೊಡವಿಕೊಂಡು 'ನೀನಾಗೇ ಮಾತನಾಡದಿದ್ದರೆ ನಾನೂ ಕ್ಷಮಿಸಲಾರೆ' ಎಂಬ ಧಾಟಿಯಲ್ಲಿ ಅವನೆಡೆಗೆ ನೋಡಿ, ಗೇಟಿನೆಡೆಗೆ ನಡೆಯಲಾರಂಭಿಸಿದಳು. ಏನು ಮಾಡುವುದೆಂದು ಗೊತ್ತಾಗದೇ ಇವನೂ ಕಾಲೆಳೆಯುತ್ತ ಹಿಂಬಾಲಿಸಿದ. ಎಲ್ಲರ ಕಣ್ಣುಗಳೂ ತಮ್ಮ ಮೇಲೇ ಇದ್ದಂತಾಗಿ, ಮುಜುಗರಗೊಂಡು ಮಾತಲಾಡಲೆತ್ನಿಸದೇ ಅವಳೊಡನೆ ಲಾಲ್‌ಬಾಗ್‌ನ ಪಶ್ಚಿಮ ದ್ವಾರದಿಂದ ಹೊರಬಂದು ಅವಳ ಪಕ್ಕ ಬಸ್ ನಿಲ್ದಾಣದಲ್ಲಿ ನಿಂತ.

**ದೂರ್ವಾಸರ ಶಾಪವಿಗೋ ಕವಿಯುತಿಹುದು ಸುತ್ತಲೂ**
**ಕಂಡುದೆಲ್ಲ ಜಾರುತಿಹುದು ಮೆಲ್ಲನಿರುಳ ತಮದೊಳು**

ತುರ್ತಾಗಿ ಕಾಯುತ್ತಿರುವಾಗ ಅರ್ಧಗಂಟೆಯಾದರೂ ಬಾರದ ೧೮ ನಂಬರಿನ ಬಸ್ಸು ಇಂದು ಎರಡು ನಿಮಿಷದಲ್ಲೇ ಬಂದು ಬಿಟ್ಟಿತು. ಅದರ ಹಣೆಯ ಮೇಲೆ ಕಪ್ಪುಬಣ್ಣದ ಬೋರ್ಡು–'ಜಯನಗರ ೯ನೇ ಬ್ಲಾಕ್'. ಅವಳು ತನ್ನ ದುಪ್ಪಟ್ಟಾದ ಸೆರಗನ್ನು ಇನ್ನೊಮ್ಮೆ ಝಾಡಿಸಿದಂತೆ ಮಾಡಿ, ಹೆಗಲ ಮೇಲೆ ಹಾಕಿಕೊಂಡು ಇವನೆಡೆಗೆ ತಿರುಗಿಯೂ ನೋಡದೇ ಬಸ್ ಹತ್ತಿಯೇ ಬಿಟ್ಟಳು. ಇವನು ಒಣಗಿ ಚುಚ್ಚುತ್ತಿದ್ದ ಬಿಡುಗಣ್ಣುಗಳಿಂದ ಅವಳು ಎರಡನೇ ಕಿಟಕಿಯಂಚಿನ ಸೀಟಿನಲ್ಲಿ ಕುಳಿತಿದ್ದನ್ನು ನೋಡಿದ. ಬಸ್ಸಿನೊಳಗೆ ದೀಪಗಳಿದ್ದುದರಿಂದ ಅವಳ ಮುಖ ಅಷ್ಟಾಗಿ ಕಾಣುತ್ತಿರಲಿಲ್ಲ. ನಿರ್ದಯಿ ಬಸ್ಸು ಮುಂದೆ ಚಲಿಸಿತು, ಸ್ವಲ್ಪದೂರದ ನಂತರ ಕಿಟಕಿಯೊಳಗಿನಿಂದ ಇವನ ಹೃದಯವೇ ಬಾಯಿಗೆ ಬಂದಂತೆ ಅವಳು 'ಇವನಿನ್ನೂ ನೋಡುತ್ತಿದ್ದಾನಾ' ಎಂಬಂತೆ ಕಿಟಕಿಯಿಂದ ಹೊರಗಿಣುಕಿ ನೋಡಿದಳು. ಇವನ ಕಣ್ಣುಗಳಲ್ಲಿ ಇವನೇ ಅರಿಯದ ಮಂಜಿನ ಪರದೆ! ಮೊಬೈಲ್ ಹಿಡಿದುಕೊಂಡಿದ್ದ ಕೈಯನ್ನೇ ಎತ್ತಿ

ಬೀಸಿದ. ಅವಳೇನೂ ಪ್ರತಿಕ್ರಿಯಿಸಲಿಲ್ಲ. ಬಸ್ಸು ಟೀಚರ್ಸ್ ಕಾಲೇಜ್ ನಿಲ್ದಾಣದಲ್ಲಿ ನಿಲ್ಲಿಸದೇ ಎಡಕ್ಕೆ ಅಶೋಕ ಪಿಲ್ಲರ್ ಕಡೆಗೆ ತಿರುಗಿಕೊಂಡಿತು. ಇವನು ಉರಿಯುವ ಎದೆಯೊಂದಿಗೆ ನಿಂತೇ ಇದ್ದ.

**ಅಸಹಾಯಕ ತಾರೆಬಳಗ ಹನಿಗಣ್ಣೊಳು ನೀರವ**
**ಸುಯ್ವ ಗಾಳಿ ತಡೆಯುತಿಹುದು ಉಕ್ಕಿಬರುವ ದುಃಖವ**

ಫಕ್ಕನೆ ರಸ್ತೆಯಂಚಿನ ದೀಪಗಳೆಲ್ಲ ಹತ್ತಿಕೊಂಡವು. ಬಸ್ ಸ್ಟಾಂಡಿನಲ್ಲಿದ್ದ ಹಿರಿಯರ್‍ಯಾರೋ ಎದೆ ಮುಟ್ಟಿಕೊಂಡು, ಕೈಗಳನ್ನು ಮುತ್ತಿಟ್ಟುಕೊಂಡರು–'ಕೃಷ್ಣಾ!'. ಇವನ ಕೈಯಲ್ಲಿದ್ದ ಮೊಬೈಲ್ ರಿಂಗಣಿಸಿತು. 'ಚಿನ್ನು ಕಾಲಿಂಗ್!' ಇವನು ಏದುಸಿರು ಬಿಟ್ಟು "ಹಲೋ" ಎಂದ. ಅತ್ತ ಕಡೆಯಿಂದ ಅವಳ ಬಿಕ್ಕಳಿಕೆ ಶುರುವಾಯಿತು. "ಐಯಾಮ್ ಸಾರಿ, ವೆರಿ ವೆರಿ ವೆರಿ ಸಾರಿ ಚಿನ್ನು! ಪ್ಲೀಸ್ ಅಳ್ಬೇಡ!" ಅವಳು ಇನ್ನೂ ಮಾತುಗಳಿಲ್ಲದೇ ಬಿಕ್ಕುತ್ತಿದ್ದಳು. ಇವನು ಫೂಟ್‌ಪಾತಿನ ಮೇಲೇ ಕ್ಷಮಾಕಾಂಕ್ಷಿಯಾಗಿ ಮಂಡಿಯೂರಿ ಕುಸಿದು ಕುಳಿತ. ಅದುರುವ ಧ್ವನಿಯಲ್ಲಿ ನುಡಿದ, "ಐಯಾಮ್ ಸಾರಿ, ಸಾರಿ ಸಾರಿ ಸಾರಿ ಕಣೇ! ಈಗ ಬಸ್ಸಲ್ಲಿ ಅಳ್ಬೇಡ. ಮನೆಗೆ ಹೋಗು. ರಾತ್ರಿ ಫೋನ್ ಮಾಡ್ತೀನಿ..." ಕರೆ ಕೊನೆಗೊಂಡಿತು. ಇವನು ಒದ್ದೆಗಣ್ಣುಗಳಲ್ಲೇ ಕತ್ತೆತ್ತಿ ಆಕಾಶವನ್ನೇ ದಿಟ್ಟಿಸಿದ. ತಣ್ಣಗಿನ ಗಾಳಿ ಶುರುವಾಗುತ್ತಿತ್ತು, ಮಳೆಗಾಲವಾದರೂ ಆಕಾಶದಲ್ಲಿ ಮೋಡಗಳಿರಲಿಲ್ಲ. ಶುಭ್ರ ಆಕಾಶದ ಕಪ್ಪಿನ ರೇಶಿಮೆ ಬಟ್ಟೆಗೆಲ್ಲ ಫಳಫಳಿಸುವ ತಾರೆಗಳ ತೂತುಗಳು. ಇವನು ತನ್ನ ಮೊಬೈಲ್‌ನ ಪರದೆಯನ್ನೇ ನೋಡುತ್ತ ಕುಳಿತ.

ಲಾಲ್‌ಬಾಗಿನಿಂದ ಪ್ರೇಮಿಗಳ, ಸ್ನೇಹಿತರ, ಕುಟುಂಬಗಳ ಕಟ್ಟಕಡೆಯ ದೊಡ್ಡ ಗುಂಪೊಂದು ಹೊರಬರುತ್ತಿತ್ತು, ರಸ್ತೆಯಂಚಿನುದ್ದಕ್ಕೂ ನಿಲ್ಲಿಸಿದ್ದ ಮೋಟಾರ್ ಸೈಕಲ್‌ಗಳು, ಕಾರುಗಳು ಮೆಲ್ಲನೆ ಖಾಲಿಯಾಗುತ್ತಿದ್ದವು, ಕಟ್ಟಕಡೆಯ ಚುರಮುರಿ, ಸೌತೆಕಾಯಿ, ಕೊನೆಯ ನಾಲ್ಕು ಮೊಳ ಮಲ್ಲಿಗೆ ಮೊಗ್ಗು, ಮಾರಾಟವಾಗುತ್ತಿದ್ದವು. ಫೂಟ್‌ಪಾತಿನ ಮೇಲೆ ನಡೆಯುತ್ತಿದ್ದವರು, ಬಸ್ ಸ್ಟಾಂಡಿನಲ್ಲಿ ನಿಂತವರು, ಮಂಡಿಯೂರಿ ಕುಳಿತ ಈ ಹುಡುಗನನ್ನೇ ವಿಚಿತ್ರವಾಗಿ ನೋಡಿದರು. ಇವನ ಮೊಬೈಲ್‌ನಲ್ಲಿ ಹೊಸ ಸಂದೇಶ. **"i luv u i luv u i luv u i luv u ... and I kill u if you do that again"** ನಸುನಕ್ಕು ಎದ್ದು ನಿಂತು, ಕಣ್ಣಂಚಿನಲ್ಲಿ ಪರದೆಗಟ್ಟುತ್ತಿದ್ದ ಹನಿಗಳನ್ನು ಮುಂಗೈಯಿಂದ ಒರೆಸಿಕೊಳ್ಳುತ್ತ ಇವನು ಅದಕ್ಕೆ ಉತ್ತರ ಬರೆದ, **"i luv u i luv u i luv u i luv u too... and I am ready to die"**

'ಈ ವಾರಾಂತ್ಯದಲ್ಲಿ ಆಯುಧಪೂಜೆ, ಅವಳಿನ್ನು ಸಿಗೋದು ಮುಂದಿನ ಮಂಗಳವಾರವೇ. ಅಷ್ಟರೊಳಗೆ ಪ್ರತೀದಿನ ತಾನು ತಪ್ಪದೇ ಅವಳಿಗೆ ಫೋನ್ ಮಾಡಬೇಕು, ಬೆಳಿಗ್ಗೆ ಸಂಜೆ ಮೆಸೇಜ್ ಕಳಿಸಬೇಕು, ಅವಳ ಮೊಬೈಲ್‌ನ ಪರದೆಯ ಮೇಲೆ ತನ್ನ ಹೆಸರು ರಾರಾಜಿಸುತ್ತದೆ, 'ಸುಮ' (ಅವರಪ್ಪ, ಅಣ್ಣನ ಹದ್ದಿನ ಕಣ್ಣುಗಳಿಂದ ತಪ್ಪಿಸಿಕೊಳ್ಳಲು ಅವಳ ಮೊಬೈಲ್‌ನಲ್ಲಿ ತನ್ನ ಹೆಸರು 'ಸುಮನ್' ಅಲ್ಲ 'ಸುಮ') ಅವಳಿಗಿಷ್ಟವಾದ 'ಲಿಲೋ ಅಂಡ್ ಸ್ಟಿಚ್' ಸಿಡಿ ಗಿಫ್ಟ್ ಕೊಡಬೇಕು. ಹಾಗೂ ಮತ್ತಿನ್ನ್ಯಾವತ್ತೂ ಅವಳ ಹೊಟ್ಟೆ ಉರಿಸೋಕೆ ಅಂತ ಕಾಲೇಜಿನಲ್ಲಿ ಮೃದುಲಾ ಜೊತೆ ಓಡಾಡಬಾರದು!'

ನಿಮಿಷಾರ್ಧದಲ್ಲೇ ಇವನ ಉತ್ತರಕ್ಕೆ ಪ್ರತ್ಯುತ್ತರ ಬಂತು. **"i will really kill u, if you talk about dieing"** ನಿಟ್ಟುಸಿರು ಬಿಟ್ಟು, ಕಣ್ಣುಗಳನ್ನು ತೀಡಿಕೊಳ್ಳುತ್ತ, ತಲೆಗೂದಲು ಸರಿಮಾಡಿಕೊಳ್ಳುತ್ತ ಬಸ್ ಸ್ಟಾಂಡಿನ ಬೆಂಚಿನ ಮೇಲೆ ಕುಳಿತು, ಬಂದ ಸಂದೇಶಕ್ಕೆ ಮತ್ತೆ ಉತ್ತರ ಬರೆಯಲಾರಂಭಿಸಿದ. ಇವನ ೨೫ನೇ ನಂಬರಿನ ಬಸ್ಸು ಬರಲಿಕ್ಕೆ ಇನ್ನೂ ಸಮಯವಿತ್ತು...

**"ನನ್ನೆದೆಯ ಭಾವಗಳಿಗೆಲ್ಲ ಪದಗಳೇ ಇಲ್ಲ**
**ಪದಗಳಿಲ್ಲದೇ ತುಟಿಯಂಚಲಿ ಮಾತೂ ಇಲ್ಲ,**
**ನಿನ್ನೆದೆಯ ತಾಕುವ ನನ್ನೆದೆಯ ಮಿಡಿತದ**
**ಅದುರು ಬೆರಳಿನ ಮೌನವೇ ಮಾತೆಲ್ಲ"**

------------------------------

## ಹ್ಯಾವ್ ಎ ನೈಸ್ ಡೇ!

**ಕೆ. ಎಸ್. ಶಿವಕುಮಾರ** *ks_shivu@yahoo.com*